ಕರ್ನಾಟಕ ಸರ್ಕಾರ

ಡಿಸೆಂಬರ್ 30 , 2016

ರಾಜ್ಯದ ಬರಪೀಡಿತ ಪ್ರದೇಶಗಳಲ್ಲಿ ಉಪಶಮನ ಉಪಕ್ರಮಗಳನ್ನು ಕೈಗೊಳ್ಳಲು 4702.54 ಕೋಟಿ ರೂ ಅನುದಾನ ಬಿಡುಗಡೆ ಮಾಡುವಂತೆ ಪ್ರಧಾನಿಗೆ ಸಿದ್ದರಾಮಯ್ಯ ನೇತೃತ್ವದ ಸರ್ವಪಕ್ಷ ನಿಯೋಗದ ಮನವಿ

ಬೆಂಗಳೂರು, ಡಿಸೆಂಬರ್ 30:

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಶುಕ್ರವಾರ ಸಂಜೆ ನವದೆಹಲಿಯಲ್ಲಿ ಭೇಟಿ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ವಪಕ್ಷ ನಿಯೋಗವು ರಾಜ್ಯದ ಬರಪೀಡಿತ ಪ್ರದೇಶಗಳಲ್ಲಿ ಉಪಶಮನ ಉಪಕ್ರಮಗಳನ್ನು ಕೈಗೊಳ್ಳಲು ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ ಕೂಡಲೇ 4702.54 ಕೋಟಿ ರೂ ಅನುದಾನವನ್ನು ಬಿಡುಗಡೆ ಮಾಡುವಂತೆ ಮನವಿ ಸಲ್ಲಿಸಿತು.

ರಾಜ್ಯದ ಬಹು ಭಾಗ ತೀವ್ರ ಬರ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಬಹುತೇಕ ಎಲ್ಲಾ ತಾಲ್ಲೂಕುಗಳಲ್ಲೂ ಎಂಟರಿಂದ 12 ವಾರಗಳ ಕಾಲ ಸತತವಾಗಿ ಒಣ ಹವೆ ದಾಖಲಾಗಿದೆ.

ಭಾರತ ಸರ್ಕಾರದ ಬರ ಕೈಪಿಡಿ–2009 ರ ಮಾನದಂಡ ಸೂತ್ರಗಳಂತೆ ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ ರಾಜ್ಯದ 176 ತಾಲ್ಲೂಕುಗಳ ಪೈಕಿ 139 ತಾಲ್ಲೂಕುಗಳು ಬರಪೀಡಿತ ಎಂದು ಘೋಷಿತವಾಗಿದೆ. ಮಳೆ ಪ್ರಮಾಣದ ಕೊರತೆಯ ಹಿನ್ನೆಲೆಯಲ್ಲಿ, ರಾಜ್ಯದ 36.35 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿದ್ದ 17,193 ಕೋಟಿ ರೂ. ಅಂದಾಜು ಮೌಲ್ಯದ ಬೆಳೆ ಹಾನಿಯಾಗಿದೆ.

ಅಲ್ಲದೆ, 35 ಲಕ್ಷ ರೈತರು ಬಾಧಿತರಾಗಿದ್ದಾರೆ. ರಾಜ್ಯದಲ್ಲಿ ಈ ಕಠಿಣ ಬರದಿಂದ ಕೃಷಿ, ವಿದ್ಯುತ್ ಉತ್ಪಾದನೆ, ಅಂತರ್ಜಲ ಮರುಪೂರಣ, ಕುಡಿಯುವ ನೀರು ಪೂರೈಕೆ ಹಾಗೂ ಮೇವಿನ ಲಭ್ಯತೆಯ ಮೇಲೆ ತೀವ್ರ ಪರಿಣಾಮ ಬೀರಿದೆ. ಪ್ರಸ್ತುತ ಹಿಂಗಾರು ಹಂಗಾಮಿನ ಅವಧಿಯಲ್ಲೂ ಮಳೆಯ ಪ್ರಮಾಣದಲ್ಲಿ ದಾಖಲೆಯ ಶೇಕಡಾ 80 ರಷ್ಟು ಕೊರತೆ ಉಂಟಾಗಿರುವುದು

ರಾಜ್ಯದ ಸಂಕಷ್ಟ ದುಪ್ಪಟ್ಟಾದಂತಾಗಿದೆ. ಕರ್ನಾಟಕದ ಕೆಲವು ಭಾಗಗಳಲ್ಲಿ ಸತತ ಆರನೇ ಬಾರಿಗೆ ಬರ ಪರಿಸ್ಥಿತಿ ಎದುರಾಗಿದೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಬಯಸಿದೆ. 2015–16 ನೇ ಸಾಲಿನಲ್ಲಿ 137 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿತ್ತು. ಪ್ರಸಕ್ತ ವರ್ಷವು ಸತತ ಎರಡನೇ ಬಾರಿಗೆ ರಾಜ್ಯದ ಬಹು ಭಾಗವು ಬಾಧಿತವಾಗಿದೆ.

ಬರ ಬಾಧಿತ ತಾಲ್ಲೂಕುಗಳಲ್ಲಿ ಉಪ ಶಮನದ ಉಪಕ್ರಮಗಳನ್ನು ಕೈಗೊಳ್ಳಲು ರಾಜ್ಯ ಸರ್ಕಾರವು 4702.54 ಕೋಟಿ ರೂ ಆರ್ಥಿಕ ನೆರವು ಕೋರಿ ಕೇಂದ್ರ ಕೃಷಿ ಸಚಿವರಿಗೆ ನವೆಂಬರ್ 15 ರಂದು ಮನವಿ ಸಲ್ಲಿಸಿದೆ. ಕೇಂದ್ರದ ಅಧಿಕಾರಿಗಳ ತಂಡವು ನವೆಂಬರ್ 2 ರಿಂದ 5 ರ ವರೆಗೆ ಬರ–ಪೀಡಿತ ತಾಲ್ಲೂಕುಗಳಿಗೆ ಭೇಟಿ ನೀಡಿದೆ. ಆದರೆ, ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ

ಕೇಂದ್ರದ ನೆರವು ಈವರೆಗೆ ಮಂಜೂರು ಹಾಗೂ ಬಿಡುಗಡೆಯಾಗಿಲ್ಲ. ಕುಡಿಯುವ ನೀರು ಪೂರೈಕೆ ಹಾಗೂ ಮೇವಿನಂತಹ ತುರ್ತು ಚಟುವಟಿಕೆಗಳಿಗಾಗಿ ರಾಜ್ಯ ಸರ್ಕಾರವು ಬಿಡುಗಡೆ ಮಾಡುವುದು ಅನಿವಾರ್ಯವಾಗಿದೆ. ಇದು ರಾಜ್ಯದ ಬೊಕ್ಕಸಕ್ಕೆ ಹೊರೆಯಾಗಿದೆ.

ಇದರ ಜೊತೆಗೆ, ಸೆಪ್ಟೆಂಬರ್ ತಿಂಗಳಲ್ಲಿ ಅತೀವೃಷ್ಟಿಯಿಂದ ಉತ್ತರ ಕರ್ನಾಟಕದ ಐದು ಜಿಲ್ಲೆಗಳ ಹಲವು ತಾಲ್ಲೂಕುಗಳಲ್ಲಿ ನೆರೆ ಪರಿಸ್ಥಿತಿ ಉದ್ಭವಿಸಿ, ಮಾನವ ಹಾಗೂ ಜಾನುವಾರು ಜೀವ ಹಾನಿ, ಬೆಳೆ ಹಾಗೂ ಸಾರ್ವಜನಿಕ ಆಸ್ತಿ ನಷ್ಟ ಉಂಟಾಗಿದೆ. ತುರ್ತು ಪರಿಹಾರ ಕ್ರಮಕ್ಕಾಗಿ ರಾಜ್ಯ ಸರ್ಕಾರವು 75 ಕೋಟಿ ರೂ ಬಿಡುಗಡೆ ಮಾಡಿದೆ. ಅಲ್ಲದೆ, ಅಕ್ಟೋಬರ್ 28 ರಂದು ಕೇಂದ್ರ ಗೃಹ ಸಚಿವರಿಗೆ ನೆರೆ ಪರಿಹಾರ ಕಾಮಗಾರಿಗಳಿಗೆ 386.44 ಕೋಟಿ ರೂ ಅನುದಾನ ಬಿಡುಗಡೆ ಮಾಡುವಂತೆ ಕೋರಿ ಮನವಿ ಸಲ್ಲಿಸಲಾಗಿದೆ. ನಷ್ಟದ ಪ್ರಮಾಣವನ್ನು ಅಂದಾಜಿಸಲು ಕೇಂದ್ರದ ಅಧಿಕಾರಿಗಳ ತಂಡವು ಡಿಸೆಂಬರ್ 14 ರಿಂದ 17 ರ ವರೆಗೆ ಭೇಟಿ ನೀಡಿ ಸಮೀಕ್ಷೆ ನಡೆಸಿದೆ.

ಆದರೆ, ರಾಜ್ಯವು ಇನ್ನೂ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ ಪರಿಹಾರದ ನಿರೀಕ್ಷೆಯಲ್ಲಿದೆ. ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ ಪರಿಹಾರದ ಮೊತ್ತವನ್ನು ಅನುದಾನದ ರೂಪದಲ್ಲಿ ಶೀಘ್ರವಾಗಿ ಬಿಡುಗಡೆ ಮಾಡುವಂತೆ ಸಂಬಂಧಿತರಿಗೆ ಕೂಡಲೇ ಸೂಚಿಸುವಂತೆ ಮನವಿ ಮಾಡುತ್ತೇನೆ. ಇದರಿಂದ ಯಾವುದೇ ವಿಳಂಬವಿಲ್ಲದೆ ಉಪ ಶಮನ ಉಪ ಕ್ರಮಗಳನ್ನು ಕೈಗೊಳ್ಳಲು ಅನುಕೂಲವಾಗುತ್ತದೆ ಎಂದು ಸಿದ್ದರಾಮಯ್ಯ ಅವರು ರಾಜ್ಯ ಸರ್ಕಾರದ ಪರವಾಗಿ ಸಲ್ಲಿಸಿರುವ ಮನವಿಯಲ್ಲಿ ತಿಳಿಸಿದ್ದಾರೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರಾಜ್ಯದಲ್ಲಿ 10 ಕೋಟಿ ಮಾನವ ದಿನಗಳ ಸೃಜನೆಗೆ ಅನುವಾಗುವಂತೆ ಕಾರ್ಮಿಕ ಆಯವ್ಯಯವನ್ನು ಹೆಚ್ಚಿಸಲು ಸರ್ವಪಕ್ಷ ನಿಯೋಗದ ಮನವಿ

ಬೆಂಗಳೂರು, ಡಿಸೆಂಬರ್ 30:

ನವದೆಹಲಿಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಶುಕ್ರವಾರ ಭೇಟಿ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ವಪಕ್ಷ ನಿಯೋಗವು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ

ಉದ್ಯೋಗ ಖಾತರಿ ಯೋಜನೆಯಡಿ ರಾಜ್ಯದಲ್ಲಿ ಹತ್ತು ಕೋಟಿ ಮಾನವ ದಿನಗಳ ಸೃಜನೆಗೆ ಅನುವಾಗುವಂತೆ ಕಾರ್ಮಿಕ ಆಯವ್ಯಯವನ್ನು ಹೆಚ್ಚಿಸಲು ಮನವಿ ಸಲ್ಲಿಸಿದೆ.

ಪ್ರಸ್ತುತ 6.07 ಕೋಟಿ ಮಾನವ ದಿನಗಳಿಂದ ಹತ್ತು ಕೋಟಿ ಮಾನವ ದಿನಗಳ ಸೃಜನೆಯಿಂದ ಬರದಿಂದ ತತ್ತರಿಸುತ್ತಿರುವ ರಾಜ್ಯದಲ್ಲಿ ಪರಿಹಾರ ಕಾಮಗಾರಿಗಳ ಅನುಷ್ಠಾನಕ್ಕೆ ಅನುಕೂಲವಾಗಲಿದೆ. ಕಳೆದ ಆರು ವರ್ಷಗಳಿಂದ ಸತತವಾಗಿ ಬರದ ಬವಣೆಯಿಂದ ತೀವ್ರವಾಗಿ ಬಳಲುತ್ತಿರುವ ರಾಜ್ಯವು ಪ್ರಸಕ್ತ 2016–17 ನೇ ಸಾಲಿನಲ್ಲಿ ಮುಂಗಾರು ಹಂಗಾಮಿನಲ್ಲಿ 176 ತಾಲ್ಲೂಕುಗಳ ಪೈಕಿ 139 ತಾಲ್ಲೂಕುಗಳಲ್ಲಿ ಮತ್ತಷ್ಟು ಕಠಿಣ ಬರ ಪರಿಸ್ಥಿತಿ ಎದುರಿಸುತ್ತಿದೆ. ಮಳೆಯ ಪ್ರಮಾಣವು ಹಿಂಗಾರು ಋತುವಿನಲ್ಲೂ ಅತ್ಯಲ್ಪವಾಗಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಪ್ರಾಥಮಿಕವಾಗಿ ಬರ ಉಪಶಮನ ಉಪ ಕ್ರಮವಾಗಿರುವ ಹಿನ್ನೆಲೆಯಲ್ಲಿ, ಗ್ರಾಮೀಣ ಜನತೆಗೆ ಉದ್ಯೋಗಾವಕಾಶ ಕಲ್ಪಿಸಿ ನೆರವು ಒದಗಿಸಲು ಅಧಿಕ ಮಾನವ ದಿನಗಳನ್ನು ಸೃಜಿಸುವ ಅಗತ್ಯವಿದೆ.

ಬರ ಘೋಷಣೆಯ ಪ್ರಸ್ತಾವನೆಯನ್ನು ಗ್ರಾಮೀಣಾಭಿವೃದ್ಧಿ ಮಂತ್ರಾಲಯಕ್ಕೆ ಅಕ್ಟೋಬರ್ 18 ಹಾಗೂ ನವೆಂಬರ್ 2 ರಂದು ಸಲ್ಲಿಸಿದ ಸಂದರ್ಭದಲ್ಲಿಯೇ ಅರ್ಹ ಮಾನವ ದಿನಗಳ ಸಂಖ್ಯೆಯನ್ನು 100 ದಿನಗಳಿಂದ 150 ದಿನಗಳಿಗೆ ಹೆಚ್ಚಿಸುವಂತೆ ಕೋರಲಾಗಿದ್ದು, ಗ್ರಾಮೀಣಾಭಿವೃದ್ಧಿ ಮಂತ್ರಾಲಯದಿಂದ ಸಮ್ಮತಿಯ ನಿರೀಕ್ಷೆಯಲ್ಲಿದ್ದೇವೆ. ಐವತ್ತೆಂಟು ಸಾವಿರಕ್ಕೂ ಹೆಚ್ಚು ಕುಟುಂಬಗಳು 100 ದಿನಗಳ ಉದ್ಯೋಗ ಸೌಲಭ್ಯವನ್ನು ಈಗಾಗಲೇ ಪಡೆದಿವೆ. ಬರದ ಕಠಿಣತೆಯನ್ನು ಪರಿಗಣಿಸಿ ಬರ ಪೀಡಿತ ಪ್ರದೇಶದಲ್ಲಿ ಅರ್ಹ ಮಾನವ ದಿನಗಳ ಸಂಖ್ಯೆಯನ್ನು ಭಾರತ ಸರ್ಕಾರವು 200 ದಿನಗಳಿಗೆ ಹೆಚ್ಚಿಸಲು ಪರಿಗಣಿಸುವ ಅವಶ್ಯಕತೆ ಇದೆ.

ಪ್ರಸಕ್ತ 2016–17 ನೇ ಸಾಲಿನಲ್ಲಿ ಹತ್ತು ಕೋಟಿ ಮಾನವ ದಿನಗಳ ಪರಿಷ್ಕೃತ ಕಾರ್ಮಿಕ ಆಯವ್ಯಯವು ಒಟ್ಟಾರೆ ವಾರ್ಷಿಕ 3,954 ಕೋಟಿ ರೂ ಆಗಲಿದೆ. ಡಿಸೆಂಬರ್ 26 ರ ವರೆಗೆ 5.82 ಕೋಟಿ ಮಾನವ ದಿನಗಳು ಸೃಜನೆಯಾಗಿದೆ. ಅಲ್ಲದೆ, 2,051 ಕೋಟಿ ರೂ ವೆಚ್ಚವಾಗಿದೆ.

ಪ್ರಸಕ್ತ ಸಾಲಿನಲ್ಲಿ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಕಳೆದ ಸಾಲಿನಲ್ಲಿ ಪಾವತಿಸಬೇಕಾಗಿದ್ದ ಭಾಗಶಃ ಮೊತ್ತವನ್ನೂ ಒಳಗೊಂಡಂತೆ 1,610 ಕೋಟಿ ರೂ ಅನುದಾನವನ್ನು ಬಿಡುಗಡೆ ಮಾಡಿದೆ.

ಈ ಯೋಜನೆಯಡಿ ಉದ್ಭವಿಸಿದ್ದ ಹಣಕಾಸು ಸಮಸ್ಯೆಯನ್ನು ಎದುರಿಸುವ ಸಲುವಾಗಿ ಸಕಾಲಿಕ ಕೂಲಿ ಪಾವತಿಗಾಗಿ ರಾಜ್ಯದ ಪಾಲಿಗಿಂತಲೂ 862 ಕೋಟಿ ರೂ ಅಧಿಕ ಮೊತ್ತದ ಅನುದಾನವನ್ನು ರಾಜ್ಯ ಸರ್ಕಾರವು ಬಿಡುಗಡೆ ಮಾಡಿದೆ. ಕಳೆದ ಒಂದರಿಂದ ಮೂರು ತಿಂಗಳ ಅವಧಿಯಲ್ಲಿ ಖರೀದಿಸಲಾದ ಸಾಮಗ್ರಿಗಳಿಗೆ 250 ಕೋಟಿ ರೂ ಬಾಕಿ ಪಾವತಿಸಿದೆ. ಸಾಮಗ್ರಿಗಳ ಬಾಕಿ ಪಾವತಿಯಲ್ಲಿನ

ವಿಳಂಬದ ಹಿನ್ನೆಲೆಯಲ್ಲಿ, ಮಾನವ ದಿನಗಳ ಸೃಜನೆಯ ವೇಗವು ಕಡಿಮೆಯಾಗಿದೆ. ಅಂಗನವಾಡಿ ಕೇಂದ್ರ, ರಾಜೀವ್ ಗಾಂಧಿ ಸೇವಾ ಕೇಂದ್ರ, ದನದ ಕೊಟ್ಟಿಗೆ, ತೋಟಗಾರಿಕಾ ಕಾಮಗಾರಿಗಳು ಒಳಗೊಂಡಂತೆ ಎಲ್ಲಾ ಸಂಪತ್ತು ಸೃಷ್ಟಿ ಕಾಮಗಾರಿಗಳು ಸ್ಥಗಿತಗೊಂಡಿವೆ. ಇವೆಲ್ಲವೂ ಪ್ರಗತಿಯ ವಿವಿಧ ಹಂತಗಳಲ್ಲಿವೆ. ಅನಗತ್ಯ ವಿಳಂಬವು ವೆಚ್ಚದಲ್ಲಿ ಏರಿಕೆ ಹಾಗೂ ಗುಣಮಟ್ಟದಲ್ಲಿ ಕುಸಿತ ಉಂಟಾಗಲಿದೆ.

ಆದಕಾರಣ, ಎರಡನೇ ಕಂತನ್ನು ತಕ್ಷಣವೇ ಬಿಡುಗಡೆ ಮಾಡುವಂತೆ ನವೆಂಬರ್ 21 ರ ರಾಜ್ಯ ಸರ್ಕಾರವು ಸಲ್ಲಿಸಿದ 2,856.72 ಕೋಟಿ ರೂ ಮನವಿಗೆ ಪ್ರತಿಯಾಗಿ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಡಿಸೆಂಬರ್ 16 ರಂದು 250.02 ಕೋಟಿ ರೂ ಕೂಲಿ ಹಾಗೂ ಐದು ಕೋಟಿ ರೂ ಸಾಮಗ್ರಿ ಹಾಗೂ ಆಡಳಿತಾತ್ಮಕ ವೆಚ್ಚವನ್ನು ಬಿಡುಗಡೆ ಮಾಡಿದೆ. ಬಾಕಿಯನ್ನು ಪರಿಗಣಿಸಿದಲ್ಲಿ ಇದು ನಗಣ್ಯ.

ಈ ಹಿನ್ನೆಲೆಯಲ್ಲಿ, ಕಾಯಿದೆಯಲ್ಲಿನ ಶಾಸನಬದ್ಧ ಕಟ್ಟುಪಾಡುಗಳನ್ನು ಪಾಲಿಸಲು ಎರಡನೇ ಕಂತಿನ ಮೊತ್ತ 2,856.72 ಕೋಟಿ ರೂ ಕೂಡಲೇ ಬಿಡುಗಡೆ ಮಾಡುವಂತೆ ಹಾಗೂ ರಾಜ್ಯದ ಬರಪೀಡಿತ 139 ತಾಲ್ಲೂಕುಗಳಲ್ಲಿ ಪ್ರತಿ ಕುಟುಂಬದ ಅರ್ಹ ಮಾನವ ದಿನಗಳನ್ನು 100 ದಿನಗಳಿಂದ 200 ದಿನಗಳಿಗೆ ಹೆಚ್ಚಿಸಲು ಸಂಬಂಧಿತರಿಗೆ ಸೂಚಿಸಲು ಕೋರುತ್ತೇನೆ. ಭಾರತ ಸರ್ಕಾರವು ನಮ್ಮ ಈ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಲಿದೆ ಎಂಬ ವಿಶ್ವಾಸ ತಮಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮನವಿ ಪತ್ರದಲ್ಲಿ ತಿಳಿಸಿದ್ದಾರೆ.

****

ಡಿ ಪಿ ಎಂ